# ವಿಶ್ವನಂದಿನಿ ಲೇಖನಮಾಲೆ – 75

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಮೂವತ್ನಾಲ್ಕನೆಯ ಪದ್ಯ

ಭೀಮಾರ್ಜುನರ ಕೈಯಲ್ಲಿ ಕೌರವಕುಲವನೆಲ್ಲವ ಕೊಲ್ಲಿಸಿದೆ ಎಂದು ಕುರುಕ್ಷೇತ್ರದ ಯದ್ಧವನ್ನು ನೆನಪಿಗೆ ತಂದುಕೊಂಡ ದಾಸರು ಆ ಯುದ್ಧದಲ್ಲಿ ಪರಮಾತ್ಮ ತೋರಿಸಿದ ಒಂದೆರಡು ಅದ್ಭುತ ಪರಕ್ರಮಗಳನ್ನು ಮುಂದಿನ ನಾಲ್ಕು ಶ್ಲೋಕಗಳಲ್ಲಿ ನೆನೆಯುತ್ತಾರೆ –

**ನರಗೆ ಸಾರಥಿಯಾಗಿ ರಣದೊಳು**
**ತುರಗ ನೀರಡಿಸಿದರೆ ವಾರಿಯ**
**ಸರಸಿಯನು ನಿರ್ಮಿಸಿ ಕಿರೀಟಿಯ ಕೈಲಿ ಸೈಂಧವನ।**
**ಶಿರವ ಕೆಡಹಿಸಿ ಅವನ ತಂದೆಯ**
**ಕರತಳಕೆ ನೀಡಿಸಿದೆ ಹರ ಹರ**
**ಪರಮಸಾಹಸಿ ನೀನು ರಕ್ಷಿಸು ನಮ್ಮನನವರತ ॥ ೩೪ ॥**

ಓ ಕೇಶವ ನೀನು 'ನರಗೆ' ಅರ್ಜುನಗೆ ಸಾರಥಿಯಾಗಿ, 'ತುರಗ' ರಥದ ಕುದುರೆಗಳು

'ನೀರಡಿಸಿದರೆ' ಬಾಯಾರಿದರೆ 'ಆ ಕಿರೀಟಿಯ ಕೈಲಿ' ಆ ಅರ್ಜುನನ ಕೈಲಿ 'ವಾರಿಯ ಸರಸಿಯನು' ಶುಭ್ರ ನೀರಿನ ಕೊಳವನ್ನು 'ನಿರ್ಮಿಸಿ' ನಿರ್ಮಿಸಿಸಿ ಬಳಿಕ 'ಸೈಂಧವನ' ಜಯದ್ರಥನ 'ಶಿರವ ಕೆಡಹಿಸಿ' ತಲೆಯನ್ನು ಕತ್ತರಿಸಿಸಿ ಆ ಕತ್ತರಿಸಿದ ತಲೆಯನ್ನು 'ಅವನ' ಜಯದ್ರಥನ 'ತಂದೆಯ' ವೃದ್ಧಕ್ಷತ್ರನ ಕರತಳಕೆ ನೀಡಿಸಿದೆ ಸಂಧ್ಯಾವಂದನೆಗೆ ಕುಳಿತಿದ್ದ ಆ ವೃದ್ಧಕ್ಷತ್ರನ ತೊಡೆಯ ಮೇಲೆ ಬೀಳುವ ಹಾಗೆ ಮಾಡಿ ಅವನು ಅದನ್ನು ತನ್ನ ಕೈಯಿಂದಲೇ ನೆಲಕ್ಕೆ ಬೀಳಿಸುವ ಹಾಗೆ ಮಾಡಿದೆ, ಹರ ಹರ! ಆಶ್ಚರ್ಯದ ಉದ್ಗಾರವಿದು, ನೀನು ಪರಮಸಾಹಸಿ. ನಮ್ಮನ್ನು ಅನವರತ ರಕ್ಷಿಸು ಎಂದು ಅನ್ವಯಾರ್ಥ.

ಕುರುಕ್ಷೇತ್ರದ ಯುದ್ಧದ ಹದಿನಾಲ್ಕನೆಯ ದಿವಸ. ಹಿಂದಿನ ದಿನದ ಅಭಿಮನ್ಯುವಿನ ಸಾವಿಗೆ ಜಯದ್ರಥನೇ ಪ್ರಧಾನ ಕಾರಣ ಎಂದು ತಿಳಿದ ಅರ್ಜುನ “ಈ ಸಂಜೆಯೊಳಗೆ ಜಯದ್ರಥನನ್ನು ಕೊಲ್ಲುತ್ತೇನೆ, ಕೊಲ್ಲಲಾಗದಿದ್ದಲ್ಲಿ ಅಗ್ನಿಪ್ರವೇಶವನ್ನು ಮಾಡುತ್ತೇನೆ” ಎಂದು ಪ್ರತಿಜ್ಞೆಯನ್ನು ಮಾಡುತ್ತಾನೆ. ಸಂಜೆ ಬಹಳ ಹೊತ್ತಾದರೂ ಜಯದ್ರಥ

ಅರ್ಜುನನಿಗೆ ದೊರೆತಿರುವದಿಲ್ಲ. ಈ ರೀತಿಯಲ್ಲಾದರೂ ಅರ್ಜುನ ಸಾಯಲಿ ಎಂದು ದುರ್ಯೋಧನ ಎಲ್ಲರಿಗೂ ಜಯದ್ರಥನನ್ನು ಮರೆಮಾಚಿ ರಕ್ಷಿಸುವಂತೆ ತಿಳಿಸಿರುತ್ತಾನೆ. ಅರ್ಜುನ ಜಯದ್ರಥನನ್ನು ಹುಡುಕಿಕೊಂಡೇ ಯುದ್ಧವನ್ನು ಮುಂದುವರೆಸುತ್ತಿರುತ್ತಾನೆ. ಮಧ್ಯದಲ್ಲಿ ಸಾತ್ಯಕಿಯನ್ನು ಭೂರಿಶ್ರವಸ್ ಕೊಲ್ಲಲು ಬಂದಾಗ ವಿಶ್ವತಶ್ಚಕ್ಷುವಾದ ಶ್ರೀಕೃಷ್ಣ ಅದನ್ನು ಕಂಡು ಸಾತ್ಯಕಿಯನ್ನು ರಕ್ಷಿಸು ಎಂದು ಅರ್ಜುನನಿಗೆ ಹೇಳುತ್ತಾನೆ. ಕೃಷ್ಣ ಹೇಳುತ್ತಿದ್ದಂತೆಯೇ ಭಲ್ಲೆಯನ್ನು ಎಸೆದ ಅರ್ಜುನ ಭೂರಿಶ್ರವಸ್ಸನ್ನು ಕೊಂದು ತನ್ನ ಶಿಷ್ಯನನ್ನು ರಕ್ಷಿಸುತ್ತಾನೆ.

ಅಷ್ಟರಲ್ಲಿ ಬಹಳ ಅಲೆದಾಡಿದ್ದ ಅರ್ಜುನನ ರಥದ ಕುದುರೆಗಳು ಬಹಳ ಬಾಯಾರಿರುತ್ತವೆ. ಆಗ ರಣರಂಗದ ಮಧ್ಯದಲ್ಲಿಯೇ ಒಂದು ಅಶ್ವಶಾಲೆ ಮತ್ತು ನೀರಿನ ಕೊಳವನ್ನು ನಿರ್ಮಿಸಲು ಅರ್ಜುನನಿಗೆ ಶ್ರೀಕೃಷ್ಣ ತಿಳಿಸುತ್ತಾನೆ. ವಾರುಣಾಸ್ತ್ರದಿಂದ ತಂಪಾದ ನೀರಿನ ಕೊಳವನ್ನು ನಿರ್ಮಿಸಿ, ಬಾಣಗಳಿಂದಲೇ ಒಂದು ಅಶ್ವಶಾಲೆಯನ್ನು ಅರ್ಜುನ ನಿರ್ಮಿಸುತ್ತಾನೆ.

ಶ್ರೀಕೃಷ್ಣ ಕುದುರೆಗಳ ಮೈದಡವಿ ನೀರುಣಿಸಿ ಅವುಗಳ ಶ್ರಮವನ್ನು ಪರಿಹರಿಸುತ್ತಿರುತ್ತಾನೆ, ಇತ್ತ ಅರ್ಜುನ ಹಗೆಗಳೊಡನೆ ನೆಲದ ಮೇಲೆ ನಿಂತೇ ಕಾದಾಡುತ್ತಿರುತ್ತಾನೆ. ಬಳಿಕ ಸೂರ್ಯ ಕೆಂಪಗಾಗಲು ಆರಂಭಿಸಿದರೂ ಜಯದ್ರಥ ಕಾಣದಿದ್ದಾಗ ಪರಮಾತ್ಮ ಕತ್ತಲೆಯನ್ನು ಸೃಷ್ಟಿಸುತ್ತಾನೆ. ಅರ್ಜುನನ ಅಗ್ನಿಪ್ರವೇಶವನ್ನು ನೋಡಲೋಸುಗ ಸೈನ್ಯದ ಮಧ್ಯದಲ್ಲಿ ಅಡಗಿದ್ದ ಜಯದ್ರಥ ತಲೆಯೆತ್ತಿ ಅರ್ಜುನನನ್ನು ಕಾಣುತ್ತಾನೆ. ಕೊಲ್ಲೀಗ ಅವನನ್ನು ಎಂದು ಆಜ್ಞಾಪಿಸಿದ ಕೃಷ್ಣನ ಮಾತನ್ನು ಕೇಳುತ್ತಲೇ ಧನುಷ್ಯಕ್ಕೆ ಬಾಣ ಹೂಡಿದ ಅರ್ಜುನ ಅವನ ತಲೆಯನ್ನು ಕತ್ತರಿಸುತ್ತಾನೆ. ಕತ್ತರಿಸುತ್ತಿದ್ದ ಹಾಗೆಯೇ ಕತ್ತಲೆ ಹೋಗಿ ಕೆಂಪಗಿನ ಸೂರ್ಯ ಎಲ್ಲರ ಕಣ್ಣಿಗೆ ಕಾಣುತ್ತಾನೆ. ಪ್ರತಿಯೊಬ್ಬರೂ ಆಶ್ಚರ್ಯದ ಉದ್ಗಾರವನ್ನು ತೆಗೆಯುತ್ತಿರುವಾಗಲೇ ಶ್ರೀಕೃಷ್ಣ ಅರ್ಜುನನಿಗೆ ಜಯದ್ರಥನ ತಲೆಯನ್ನು ನೆಲದ ಮೇಲೆ ಬೀಳಿಸಬೇಡ ಎಂದು ಆದೇಶಿಸುತ್ತಾನೆ. ಯಾಕೆ ಏನು ಎಂದು ಪ್ರಶ್ನೆ ಮಾಡದ ಅರ್ಜುನ ಪುಂಖಾನುಪುಂಖವಾಗಿ ಬಾಣಗಳನ್ನು ಬಿಡುತ್ತಾ

ಪಾಶುಪತಾಸ್ತ್ರದ ಪ್ರಭಾವದಿಂದ ಅವನ ತಲೆಯನ್ನು ನೆಲಕ್ಕೆ ಬೀಳದ ಹಾಗೆ ಮುಂದಕ್ಕೊಯ್ಯುತ್ತಿರುತ್ತಾನೆ.

'ನಿನ್ನ ತಲೆಯನ್ನು ಯಾರು ನೆಲಕ್ಕುರುಳಿಸುತ್ತಾರೆಯೋ ಅವರ ತಲೊ ಹೋಳಾಗಿ ಅವರು ಸಾಯಲಿ' ಎಂದು ಜಯದ್ರಥನ ತಂದೆ ಜಯದ್ರಥನಿಗೊಂದು ವರವನ್ನು ನೀಡಿರುತ್ತಾನೆ. ಇಂಥ ಒಂದು ಅಯೋಗ್ಯವರವನ್ನು ನೀಡಿದ ಅವನನ್ನು ಸಂಹರಿಸಲು ಅಪೇಕ್ಷಿಸಿದ ಶ್ರೀಕೃಷ್ಣ ಸ್ಯಮಂತಪಂಚಕದಲ್ಲಿ ಸಂಧ್ಯಾವಂದನೆ ಮಾಡುತ್ತಾ ಕುಳಿತಿದ್ದ ವೃದ್ಧಕ್ಷತ್ರನ ತೊಡೆಯ ಮೇಲೆ ಜಯದ್ರಥನ ಶಿರಸ್ಸನ್ನು ಅರ್ಜುನನ ಕೈಯಿಂದ ಬೀಳಿಸುತ್ತಾನೆ. ಗಾಭರಿಯಿಂದ ಆ ತಲೆಯನ್ನು ನೆಲಕ್ಕುರುಳಿಸಿದ ವೃದ್ಧಕ್ಷತ್ರನ ತಲೊ ಹೋಳಾಗಿ ಅವನೂ ನೆಲಕ್ಕುರುಳುತ್ತಾನೆ.

ಹೀಗೆ ವಾರುಣಾಸ್ತ್ರದಿಂದ ಸರಸಿಯ ನಿರ್ಮಾಣ, ಬಾಣಗಳಿಂದ ಅಶ್ವಶಾಲೆಯ ನಿರ್ಮಾಣ, ಕುರುಕ್ಷೇತ್ರದಿಂದ ಸೈಂಧವನ ತಲೆಯನ್ನು ಸ್ಯಮಂತಪಂಚಕಕ್ಕೆ ಬಾಣಗಳಿಂದಲೇ ಮುಂದೂಡಿ

ತಂದದ್ದು ಈ ಎಲ್ಲವನ್ನೂ ಅರ್ಜುನನೇ ಮಾಡಿದರೂ, ಅರ್ಜುನನಿಂದ ಈ ಸಾಹಸವನ್ನು ಮಾಡಿಸಿದವನು ಶ್ರೀಕೃಷ್ಣ. ಒಂದು ಅಂತರ್ಯಾಮಿಯಾಗಿ, ಎರಡನೆಯದು ರಥದ ಸಾರಥಿಯಾಗಿ. ಮಹಾಭಾರತದಲ್ಲಿ ಈ ಮಾತು ಅನುಸ್ಯೂತವಾಗಿ ಬಂದಿದೆ. ಶ್ರೀಕೃಷ್ಣನಿದ್ದ ಕಾರಣಕ್ಕಾಗಿ ಇಷ್ಟೆಲ್ಲವನ್ನೂ ಅರ್ಜುನನಿಗೆ ಮಾಡಲನುವಾಯಿತು. ಆದ್ದರಿಂದ ಶ್ರೀಕೃಷ್ಣನೇ ಪರಮಸಾಹಸಿ.

ಮತ್ತೂ, ಸೈಂಧವನ ತಲೆ ನೆಲಕ್ಕುರುಳಿದಲ್ಲಿ ಅರ್ಜುನನೇ ಸತ್ತು ಬೀಳುತ್ತಿದ್ದ. ಈ ಮಾತು ಗೊತ್ತಿದ್ದ ಶ್ರೀಕೃಷ್ಣ ಮೊದಲಿಗೇ ಅರ್ಜುನನಿಗೆ ತಿಳಿಸದೇ ತಲೆ ಕತ್ತರಿಸಿದ ಮೇಲೆ ತಿಳಿಸುತ್ತಾನೆ. ಅರ್ಥಾತ್ ಅರ್ಜುನನಿಗೆ ಅದು ಸಾಧ್ಯವಾಗದಿದ್ದರೂ ತಾನು ಅರ್ಜುನನನ್ನು ಸಾಯಗೊಡುತ್ತಿರಲಿಲ್ಲ ಎನ್ನುವದನ್ನು ತೋರಿಸುವದಕ್ಕಾಗಿ, ಮತ್ತು ಅರ್ಜುನನ ಮೈನವಿರೇಳಿಸುವ ಪರಾಕ್ರಮವನ್ನು ಜಗತ್ತಿಗೆ ತೋರಿಸುವದಕ್ಕಾಗಿ. ಅದಕ್ಕಾಗಿ ದಾಸರು

ಹೇಳಿದರು, ಪರಮಸಾಹಸಿ ನೀನು ರಕ್ಷಿಸು
ನಮ್ಮನನವರತ ಎಂದು[1] ‖ ೩೪ ‖

[1] ಈ ಭಾಗಗಳ ಉಪನ್ಯಾಸ VNU421, VNU422 ಗಳಲ್ಲಿದೆ.